ಉಪಾಧ್ಯಕ್ಷಣೆಯವರು : ಸಭೆಯ ಮುಂದೆ ಮಂಡಿಸಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿ) ಮಾನ್ಯ ಅಧ್ಯಕ್ಷರೆ, 1964ನೇ ಸಾಲಿನ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 22ನೇ ಕಲಮಿನ ಮೇರೆಗೆ

1. ಅಧಿಸೂಚನೆ ಸಂಖ್ಯೆ : ಹೆಚ್ ಡಿ 202: ಸಿಎನ್ಎ : 92, ದಿನಾಂಕ : 04-11-1992 ಚನ್ನಪಟ್ಟಣ ತಾಲ್ಲೂಕು ನಾಗಾವಾರದ ಶ್ರೀ ನಿಶಾಂತ ಸಂಚಾರಿ ಚಿತ್ರಮಂದಿರವನ್ನು ಟೆಂಪರರಿ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಬಗ್ಗೆ.
2. ಅಧಿಸೂಚನೆ ಸಂಖ್ಯೆ : ಹೆಚ್ಡಿ : 210 : ಸಿಎನ್ಎ : 92, ದಿನಾಂಕ: 17-12-1992 ತುಮಕೂರು ಜಿಲ್ಲೆ ಗುಬ್ಬಿಯ ಸೈಟ್ ನಂ. 290 :2260ನಲ್ಲಿ ಖಾಯಂ ಚಿತ್ರ ಮಂದಿರ ನಿರ್ಮಿಸಲು ನೀಡಿದ ನಿರಾಕ್ಷೇಪಣಾ ಪತ್ರದ ಅವಧಿಯನ್ನು ವಿಸ್ತರಿಸುವ ಬಗ್ಗೆ
3. ಅಧಿಸೂಚನೆ ಸಂಖ್ಯೆ : ಹೆಚ್ ಡಿ: 228:ಸಿಎನ್ಎ:92, ದಿನಾಂಕ : 17-12-1992 ಧಾರವಾಡ ಜಿಲ್ಲೆ ಹಿರೇಕೆರೂರಿನ ಶ್ರೀ ಕುಮಾರೇಶ್ವರ ಸಂಚಾರಿ ಚಿತ್ರಮಂದಿರವನ್ನು ಅರೆ ಖಾಯಂ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಅಧಿಸೂಚನೆಗಳನ್ನು ಸಭೆಯ ಮುಂದಿಡುತ್ತೇನೆ.

1951ನೇ ಇಸವಿಯ ರಾಜ್ಯ ಹಣಕಾಸು ನಿಗಮದ ಅಧಿನಿಯಮ 38(3)ನೇ ಕಲಮಿನ ಮೇರೆಗೆ :

4. 1991-92ನೇ ಸಾಲಿನ ಕರ್ನಾಟಕ ರಾಜ್ಯ ಹಣಕಾಸು ನಿಗಮದ 33ನೇ ವಾರ್ಷಿಕ ವರದಿ.

1951ನೇ ಇಸವಿಯ ರಾಜ್ಯ ಹಣಕಾಸು ನಿಗಮದ ಅಧಿನಿಯಮ 37(7)ನೇ ಕಲಮಿನ ಮೇರೆಗೆ:

5. 31ನೇ ಮಾರ್ಚ್ 1991ನೇ ಸಾಲಿಗೆ ಅಂತ್ಯಗೊಂಡ ಕರ್ನಾಟಕ ರಾಜ್ಯ ಹಣಕಾಸು ನಿಗಮದ ಲೆಕ್ಕದ ಮೇಲಿನ ಲೆಕ್ಕ ಪರಿಶೋಧನಾ ವರದಿ.

1956ನೇ ಇಸವಿಯ ಕಂಪನಿಗಳ ಅಧಿನಿಯಮ 619(ಎ) ಕಲಮಿನ ಮೇರೆಗೆ:

6. 1990-91ನೇ ಸಾಲಿನ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಯಮಿತದ 27ನೇ ವಾರ್ಷಿಕ ವರದಿ.
7. 1991-92ನೇ ಸಾಲಿನ ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮ ನಿಯಮಿತದ 7ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

II. ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಮಂತ್ರಿ) ಮಾನ್ಯ ಅಧ್ಯಕ್ಷರೆ, 1987ನೇ ಇಸವಿಯ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5)ನೇ ಕಲಮಿನ ಮೇರೆಗೆ.

1990-91ನೇ ಸಾಲಿನ ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ಪರಿಶೋಧನಾ ವರದಿಯನ್ನು ಸಭೆಯ ಮುಂದಿಡುತ್ತೇನೆ.

III. ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ)

ಮಾನ್ಯ ಅಧ್ಯಕ್ಷರೆ, 1971ನೇ ಇಸವಿಯ ನಿಯಂತ್ರಕ ಮಹಾ ಲೇಖಾ ಪರೀಕ್ಷಕರ (ಕರ್ತವ್ಯಗಳು, ಅಧಿಕಾರ ಮತ್ತು ಸೇವಾ ಷರತ್ತುಗಳು) ಅಧಿನಿಯಮ 19(ಎ) ಕಲಮಿನ ಮೇರೆಗೆ.

1987-88ನೇ ಸಾಲಿನ ಗುಲ್ಬರ್ಗಾ ಮತ್ತು ದಕ್ಷಿಣ ಕನ್ನಡ (ಮಂಗಳೂರು) ಜಿಲ್ಲಾ ಪರಿಷತ್ತುಗಳು ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕ ಪರಿಶೋಧನಾ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

IV. ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) : ಮಾನ್ಯ ಅಧ್ಯಕ್ಷರೇ,

1986ನೇ ಇಸವಿಯ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಅಧಿನಿಯಮದ 26(2)ನೇ ಕಲಮಿನ ಮೇರೆಗೆ:

1990-91 ಮತ್ತು 1991-92ನೇ ಸಾಲುಗಳ ರಾಷ್ಟ್ರೀಯ ಕಾನೂನು ಶಾಲಾ ಭಾರತೀಯ ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಗಳನ್ನು ಜನರಲ್ ಕೌನ್ಸಿಲ್ ನ ನಿರ್ಣಯದೊಂದಿಗೆ ಸಭೆಯ ಮುಂದಿಡುತ್ತೇನೆ.

V. ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಮಂತ್ರಿ) ಮಾನ್ಯ ಅಧ್ಯಕ್ಷರೆ, 1959ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ 130ನೇ ಕಲಮಿನ ಮೇರೆಗೆ

1. 1959ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯ 29ಡಿ(1)ರ ಕಲಮಿನ ಕಾರ್ಯಾಚರಣೆಯಿಂದ ಉಡಪಿ ಸಹಕಾರ ಬ್ಯಾಂಕ್ ನಿಯಮಿತವನ್ನು ವಿನಾಯಿತಿಗೊಳಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ : 07-10-1992ರಂದು ಹೊರಡಿಸಲಾದ ಸಿಎಂಡಬ್ಲ್ಯೂ 343: ಸಿಎಲ್ಎಂ: 92ರ ಕ್ರಮಾಂಕದ ಆದೇಶ.
2. ಮಡಿಕೇರಿಯಲ್ಲಿರುವ ಕೊಡಗು ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತದ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ : 29-10-1992ರಂದು ಹೊರಡಿಸಲಾದ ಸಿಎಂಡಬ್ಲ್ಯೂ : 362:ಸಿಎಲ್ಎಂ :92ರ ಕ್ರಮಾಂಕದ ಆದೇಶ.
3. 1960ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯ 54 ಹಾಗೂ 56ನೇ ನಿಯಮದ ತಿದ್ದುಪಡಿಗೆ ಸಂಬಂಧಿಸಿದಂತೆ ದಿನಾಂಕ : 12-09-1992ರಂದು ಹೊರಡಿಸಲಾದ ಸಿಎಂಡಬ್ಲ್ಯೂ: 64 : ಸಿಎಲ್ಎಂ: 91ರ ಕ್ರಮಾಂಕದ ಅಧಿಸೂಚನೆ.
4. ಚಿಕ್ಕಮಗಳೂರಿನಲ್ಲಿರುವ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಮುಂದೂಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ: 13-10-1992ರಂದು ಹೊರಡಿಸಲಾದ ಸಿಎಂಡಬ್ಲ್ಯೂ: 320 :ಸಿಎಲ್ಎಂ :92ರ ಕ್ರಮಾಂಕದ ಆದೇಶ.
5. ಗುಂಡಸಂದ್ರ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ಗುಂಡಸಂದ್ರ ಹಾಗೂ ಮಾಗಡಿ ಟಿ.ಎ.ಪಿ.ಸಿ.ಎಂ.ಎಸ್.ಲಿ.ನ ಚುನಾವಣೆಯನ್ನು ಮುಂದೂಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ: 30-10-1992 ಹೊರಡಿಸಲಾದ ಸಿಎಂಡಬ್ಲ್ಯೂ : 363:ಸಿಎಲ್ಎಂ: 92ರ ಕ್ರಮಾಂಕದ ಆದೇಶ.

6. ಸಹಕಾರ ಸಂಘಗಳ ಚುನಾವಣೆಯನ್ನು ಮುಂದೂಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ : 11-12-1992ರಂದು ಹೊರಡಿಸಲಾದ ಸಿಎಂಡಬ್ಲ್ಯೂ : 409: ಸಿಎಲ್‌ಎಂ: 92ರ ಕ್ರಮಾಂಕದ ಆದೇಶ.

7. ಬೆಂಗಳೂರು ಜಿಲ್ಲಾ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಹಕಾರ ಬ್ಯಾಂಕ್ ನಿಯಮಿತದ ವಾರ್ಷಿಕ ಸರ್ವಸದಸ್ಯರ ಸಭೆಗೆ ಸಂಬಂಧಿಸಿದಂತೆ ದಿನಾಂಕ : 20-08-1992ರಂದು ಹೊರಡಿಸಲಾದ ಸಿಎಂಡಬ್ಲ್ಯೂ: 216: ಸಿಎಲ್ ಎಂ: 92ರ ಕ್ರಮಾಂಕದ ಆದೇಶಗಳನ್ನು ಸಭೆಯ ಮುಂದಿಡುತ್ತೇನೆ.

VI. ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಮಂತ್ರಿ): ಮಾನ್ಯ ಅಧ್ಯಕ್ಷರೆ, 1957ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ ಅಧಿನಿಯಮದ 9(2)ನೇ ಕಲಮಿನ ಮೇರೆಗೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಅಮಲ್ದಾರಿ ಮಾಡಿದ ದಸ್ತಾವೇಜುಗಳ ಸಂಬಂಧದಲ್ಲಿ 1957ನೇ ಕರ್ನಾಟಕ ಸ್ಟ್ಯಾಂಪ್ ಕಾಯಿದೆಯಡಿಯಲ್ಲಿ ವಸೂಲಿ ಮಾಡಬಲ್ಲ ರೂ. 25,000-00 ಕಾಲದ ಮೊಬಲಗಿನ ಮೇಲಿನ ಸ್ಟ್ಯಾಂಪ್ ಶುಲ್ಕವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ : 02-12-1992ರಂದು ಹೊರಡಿಸಲಾದ ಆರ್ ಡಿ : 314: ಇಎಸ್‌ಆರ್ :90ರ ಕ್ರಮಾಂಕದ ಆದೇಶವನ್ನು ಸಭೆಯ ಮುಂದಿಡುತ್ತೇನೆ.

ಉಪಾಧ್ಯಕ್ಷಣಿಯವರು : ಕಾಗದ ಪತ್ರಗಳನ್ನು ಮಂಡಿಸಲಾಯಿತು.

ನಿಲುವಳಿ ಸೂಚನೆಯ ಪ್ರಸ್ತಾವ.

ಶ್ರೀ ಎಸ್. ಬಂಗಾರಪ್ಪನವರ ಆಡಳಿತದಲ್ಲಿ ರಾಜ್ಯದ ಬೊಕ್ಕಸಕ್ಕೆ ಆದ ಹಾನಿ ಬಗ್ಗೆ

ಉಪಾಧ್ಯಕ್ಷಣಿಯವರು : ನಿಮ್ಮ ನಿಲುವಳಿ ಸೂಚನೆಯು ಬಂದಿದೆ, ಆಮೇಲೆ ತಮ್ಮನ್ನು ಕರೆಯುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಲುವಳಿ ಸೂಚನೆಯನ್ನು ಕಳುಹಿಸಿದಾಗ ಮೊದಲು ಅದಕ್ಕೆ ಆದ್ಯತೆಯನ್ನು ಕೊಡಬೇಕಾಗುತ್ತದೆ. ನಾನು ಅತ್ಯಂತ ಪ್ರಮುಖವಾದಂಥ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಬಂಗಾರಪ್ಪನವರು ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡಬೇಕಾಗಿ ಬಂತು, ಆದ್ದರಿಂದ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಇದರ ಪರಿಣಾಮವಾಗಿ ರಾಜ್ಯದ ಜನತೆಯ ಮೇಲೆ ಏನಾಗಿದೆ, ರಾಜ್ಯದ ಹಣಕಾಸಿನ ಬೊಕ್ಕಸಕ್ಕೆ ಏನಾಗಿದೆ ಎನ್ನುವ ಬಗ್ಗೆ ಚರ್ಚೆಯಾಗಬೇಗಾಗಿದೆ. ಅದಕ್ಕೋಸ್ಕರ ನಿಲುವಳಿ ಸೂಚನೆಯ ಮೂಲಕ ಇದನ್ನು ಪ್ರಸ್ತಾಪ ಮಾಡಿದ್ದೆ, ಈ ಸರ್ಕಾರದ ಬೊಕ್ಕಸಕ್ಕೆ ಆಗಿರತಕ್ಕ ಅವ್ಯವಹಾರ ಅವುಗಳ ಬಗ್ಗೆ ಎಲ್ಲವನ್ನು ಸಿ.ಬಿ.ಐ. ತನಿಖೆಗೆ ಒಳಪಡಿಸಬೇಕೆಂದು ನಾವು ಮತ್ತು ಅನೇಕ ರಾಜಕೀಯ ಪಕ್ಷಗಳವರು ಒತ್ತಾಯ ಮಾಡಿದ್ದಾರೆ. ಸ್ವತಃ ಅವರ ಪಕ್ಷದವರೇ ಅನೇಕ ಭ್ರಷ್ಟಾಚಾರದ ಹಗರಣಗಳ ಬಗ್ಗೆ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ಪಟ್ಟಿಯನ್ನು ಕೊಟ್ಟು ಅದರ ಆಧಾರದ ಮೇಲೆ ಶ್ರೀಮಾನ್ ಬಂಗಾರಪ್ಪನವರು ರಾಜೀನಾಮೆಯನ್ನು ಕೊಡಬೇಕಾಯಿತು. ಇಡೀ ರಾಜ್ಯ ಇದನ್ನು ತಿಳಿದುಕೊಳ್ಳಬೇಕೆಂದಿದ್ದರೆ ಅದಕ್ಕೋಸ್ಕರ ಇದು ಪ್ರಮುಖವಾದ ವಿಚಾರವೆಂದು ಪ್ರಾಮಾಣಿಕವಾಗಿ ನಾವೆಲ್ಲರೂ ಪೂರ್ಣವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.